
# ಬೂದು ನೀಲಿಯಾದ ಸಂಭ್ರಮ



■ ಪ್ರೇಮಶೇಖರ

ರಾತ್ರಿಯಿಡೀ ಗಾಳಿ ಮಳೆ. ಬೆಳಗಾಗುವ ಹೊತ್ತಿಗೆ ನಿಂತಂತೆನಿಸಿದರೂ ನಿಂತದ್ದು ಗಾಳಿ ಮಾತ್ರ. ಮಳೆ ಒಮ್ಮೆ ನಿಂತು ಮರುಕ್ಷಣ ಸಣ್ಣಗೆ ರಾಗವಾಗಿ ಹನಿಯತೊಡಗಿದ್ದು ಎಷ್ಟೊತ್ತಾದರೂ ನಿಲ್ಲಲೇ ಇಲ್ಲ, ನಿಲ್ಲುವ ಸೂಚನೆಯೂ ಇಲ್ಲ.   ಅಂತೂ ಇದು ಒದ್ದೆ ವಾರಾಂತ್ಯ.

ಬಾಲ್ಯ ನೆನಪಾಯಿತು.

ಹನಿಮಳೆಯೆಂದರೆ ಹುರುಪು ನನಗೆ. ಉದುರುವ ಹನಿಗಳಿಗೆ ಮೈಯೊಡ್ಡಿ ಗದ್ದೆ ಹೊಲ ಬಯಲಲ್ಲಿ ನಿಧಾನವಾಗಿ ಕಾಲೆಳೆಯುತ್ತಾ ಹೋಗುವುದು ನನಗೆ ಪ್ರಿಯ ಅಂದು. ಇಂದೂ ಸಹಾ. ಆದರೆ ಈ ದೆಹಲಿಯಲ್ಲಿ ಗದ್ದೆ ಹೊಲ ಬಯಲೆಲ್ಲಿ? ಆದರೂ ಇಂದು ಹೊರಗೆ ಹೋಗಲೇಬೇಕು. ಮನೆಯಲ್ಲಿ ಕುಳಿತಿರುವುದಂತೂ ಆಗದು. ಈ ಊರಲ್ಲಿ ಗದ್ದೆ ಹೊಲ ಬಯಲು ಇಲ್ಲ ನಿಜ, 'ಈ ಮಳೆಯಲ್ಲಿ ಹೊರಗೆ ಹೋಗ್ತಿದೀಯಲ್ಲ, ಹುಚ್ಚಾ ನಿನಗೆ?' ಅಂತ ಗದರಿ ಅಡ್ಡ ನಿಲ್ಲುವವರೂ ಇಲ್ಲ. ಒಮ್ಮೊಮ್ಮೆ ಅನಾಥ ಅಂತ ಮನಸ್ಸು ಮುದುಡಿದರೂ, 'ಅರಸನ ಅಂಕೆ ಇಲ್ಲ, ದೆವ್ವದ ಕಾಟ ಇಲ್ಲ' ಅಂತ ಖುಷಿಯಾಗುವುದೇ ಹೆಚ್ಚು.

ಹುಡೆಡ್ ವಿಂಡ್ಚೀಟರ್ ಏರಿಸಿ ಹೊರನಡೆದೆ.  ಬೈಕ್ ಮುನಿರ್ಕಾ ಡಿಡಿಎ ಫ್ಲಾಟ್ಸ್ ನ ಎ ಬ್ಲಾಕ್‌ನ ಮೇಲು ರಸ್ತೆಯಲ್ಲಿ ನಿಧಾನವಾಗಿ ಸಾಗಿತು. ಎಲ್ಲಿಗಾದರೂ ಹೋಗುವ ಮೊದಲು ಪೆಟ್ರೋಲ್ ತುಂಬಿಸಬೇಕು. ಔಟರ್ ರಿಂಗ್ ರೋಡ್‌ನಲ್ಲಿ ಎಡಕ್ಕೆ ಹೊರಳಿ ವಸಂತ್ ವಿಹಾರ್‌ನ ಮೂಲೆಯ ಬಂಕ್‌ನತ್ತ ತುಸು ವೇಗವಾಗಿಯೇ ಸಾಗಿದೆ.

ಟ್ಯಾಂಕ್ ಭರ್ತಿ ಮಾಡಿಸಿದ ಮೇಲೆ, ಹಾಗೇ ನೇರಕ್ಕೆ ಹೋಗಿ, ಎಡಕ್ಕೆ ಹೊರಳಿ ಜೆಎನ್‌ಯುಗೆ ನುಗ್ಗಿದರೆ ಹೇಗೆ ಅನಿಸಿತು. ಎಷ್ಟಾದರೂ ಅದು ನನ್ನ ಆಲ್ಮಾ ಮಾರ್ಟ್. ಎಷ್ಟು ಮಳೆಯ ಬೆಳಗುಗಳಲ್ಲಿ, ಉರಿಬಿಸಿಲ ಮಧ್ಯಾಹ್ನಗಳಲ್ಲಿ, ಕತ್ತಲ ರಾತ್ರಿಗಳಲ್ಲಿ, ಮಂಜು ಮುಸುಗಿದ ಮುಂಜಾವುಗಳಲ್ಲಿ ನಾನಲ್ಲಿ ಗಂಟೆಗಟ್ಟಲೆ ಅಲೆದಿದ್ದೆ! ಭಾನುವಾರದ ಬೆಳಗುಗಳಲ್ಲಿ ನಾನಿದ್ದ ಪೂರ್ವಾಂಚಲ್ ಹಾಸ್ಟೆಲ್‌ನ ಮೆಸ್‌ನಲ್ಲಿ ಬ್ರೇಕ್‌ಫಾಸ್ಟ್ ಮುಗಿದೊಡನೇ, ಗಂಟು ಬೀಳುವ ಗೆಳೆಯರ ಕಣ್ಣುತಪ್ಪಿಸಿ ಹಾಸ್ಟೆಲ್‌ನ ಹಿಂಭಾಗದಲ್ಲಿನ ಎತ್ತರದ ಪ್ರದೇಶದಲ್ಲಿ ಕಲ್ಲುಬಂಡೆ, ಕುರುಚಲು ಪೊದೆಗಳ ನಡುವೆ ಕಾಲಾಡಿಸುತ್ತಾ, ಕಾಲ ಕೆಳಗೇ ಪುರ‍್ರನೆ ಮೇಲೆದ್ದು ಹಾರುವ ಪುಟಾಣಿ ಹಕ್ಕಿಗಳನ್ನು ನಿಂತು ನೋಡುತ್ತಾ, ಎಲ್ಲೋ ಅವಿತು ಕೂಗುವ ನವಿಲುಗಳ ಕೇಕೆಯನ್ನು ಅನುಕರಿಸುವ ಹುಡುಗಾಟವಾಗುತ್ತಾ ಗಂಟೆಗಟ್ಟಲೆ ಕಳೆಯುತ್ತಿದ್ದೆ. ಹಾಸ್ಟೆಲ್‌ನಿಂದ ಎರಡುಮೂರು ಫರ್ಲಾಂಗ್ ದೂರದಲ್ಲಿ ಯೂನಿವರ್ಸಿಟಿಯ ದಕ್ಷಿಣದ ಕಾಂಪೌಂಡ್‌ನಾಚೆ ಕುರಿ ಮಂದೆಯನ್ನು ಮೇಯಲು ಬಿಟ್ಟು ತಾವು ಬೀಡಿ ಎಳೆಯುತ್ತಾ ಕೂತ ಕುರುಬ ಹುಡುಗರ ಜತೆ ಒಂದಷ್ಟು ಹರಟೆ ಹೊಡೆಯುತ್ತಿದ್ದುದೂ ನನ್ನ ಭಾನುವಾರದ ಬೆಳಗಿನ ಅಲೆದಾಟದ ಭಾಗವಾಗಿರುತ್ತಿತ್ತು.

ಒಮ್ಮೊಮ್ಮೆ ಆ ದಿಕ್ಕು ಬಿಟ್ಟು ಅದರ ಸಂಪೂರ್ಣ ವಿರುದ್ಧಕ್ಕೆ, ಹಾಸ್ಟೆಲ್‌ನಿಂದ ಲೈಬ್ರರಿಗೆ ಹೋಗುವ ಟಾರ್ ರಸ್ತೆ ಹಿಡಿದು ಮೊದಲು ಸಿಗುವ ಕಲ್ವರ್ಟ್ ಬಳಿ ರಸ್ತೆ ತೊರೆದು, ಗಿಡಗಂಟೆಗಳಿಂದ ಮರೆಯಾಗಿದ್ದ ಕೊರಕಲಿಗೆ ಇಳಿಯುತ್ತಿದ್ದೆ.  ಪುರಾತನ ಹಳ್ಳವೊಂದರ ಒಣ ಪಾತ್ರವಾಗಿದ್ದ ಅದರ ತುಂಬಾ ವಿವಿಧ ಗಾತ್ರದ ಕಪ್ಪು, ಕೆಂಪು, ಕಂದು ಬಣ್ಣದ ಕಲ್ಲುಗಳು ತುಂಬಿದ್ದವು. ಮುಳ್ಳು ಪೊದೆಗಳೂ ಸಹಾ. ಅಲ್ಲಿ ಕಾಲಿಡುವಾಗ ಅತೀ ಎಚ್ಚರಿಕೆಯಿಂದಿರಬೇಕು. ಯಾವ ಗಳಿಗೆಯಲ್ಲಿ, ಯಾವ ದಿಕ್ಕಿನಲ್ಲಿ ಯಾವ ಜಾತಿಯದೆಂದು ಗುರುತಿಸಲಾಗದ ಹಾವು ಎದುರಾಗಿ ಹೆದರಿಸಿಬಿಡುತ್ತದೆಂದು ಹೇಳಲಾಗುವುದಿಲ್ಲ.

ಚಂದದ ದಿನಗಳು ಅವು. ಆದರೆ ಆ ದಿನಗಳೀಗ ಮುಕ್ತವಾಗಿ ನನಗೆಟುಕುವುದಿಲ್ಲ. ಓದು ಮುಗಿಸಿ, ಇನ್ಸ್ಟಿಟ್ಯೂಟ್ ಆಫ್ ಡಿಫೆನ್ಸ್ ಆ್ಯಂಡ್ ಸ್ಟ್ರಾಟೆಜಿಕ್ ಸ್ಟಡೀಸ್‌ನಲ್ಲಿ ನೌಕರಿ ಹಿಡಿದ ನಾನೀಗ ಜೆಎನ್‌ಯುಗೆ ಹೊರಗಿನವ. ಜತೆಗೆ ಈಗ ಏನೇನೋ ಕಾರಣದಿಂದಾಗಿ ಏನೇನೋ ಸೆಕ್ಯೂರಿಟಿ ರೂಲ್ಸ್ ಬಂದುಬಿಟ್ಟಿವೆ.